ಕ್ರೀಡಾಲೋಕ

# ರಿಷಭ್ ಪಂತ್ ಮತ್ತು ಸ್ಟಂಪ್ ಮೈಕ್...

■ ಗಿರೀಶ ದೊಡ್ಡಮನಿ



‘ವೇಗದ ಎಸೆತವಾಗಿತ್ತು ಅದು ರಿಷಭ್. ಸೀದಾ ಆಡಬೇಕಿತ್ತು. ಏನೋ ಡಿಫರೆಂಟ್ ಆಗಿ ಮಾಡುವ ಅಗತ್ಯ ಇರಲಿಲ್ಲ. ಹುಷಾರಾಗಿರು...’

ಭಾರತ ತಂಡದ ವಿಕೆಟ್‌ಕೀಪರ್ –ಬ್ಯಾಟರ್ ರಿಷಭ್ ಪಂತ್ ಅವರು ತಮಗೆ ತಾವೇ ಬುದ್ಧಿ ಹೇಳಿಕೊಂಡ ಈ ಮಾತು ಸ್ಟಂಪ್ ಮೈಕ್ ಮೂಲಕ ಈಗ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಜನಪ್ರಿಯವಾಗುತ್ತಿದೆ.

ವಿದೇಶದ ಪಿಚ್‌ಗಳಲ್ಲಿ ತಮ್ಮ ದಿಟ್ಟ ಬ್ಯಾಟಿಂಗ್‌ಗೆ ಗುರುತಿಸಿಕೊಂಡವರು. ಈಚೆಗೆ ಹೆಡಿಂಗ್ಲೆಯಲ್ಲಿ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಹೊಡೆದು ದಾಖಲೆ ಮಾಡಿದ್ದರು. ಈ ಸಾಧನೆ ಮಾಡಿದ ಭಾರತದ ಮೊದಲ ಹಾಗೂ ವಿಶ್ವದ ಎರಡನೇ ವಿಕೆಟ್‌ಕೀಪರ್ (ಜಿಂಬಾಬ್ವೆಯ ಆ್ಯಂಡಿ ಫ್ಲವರ್ ನಂತರ) ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅವರು ಈ ಪಂದ್ಯದಲ್ಲಿ ಶುಭಮನ್ ಗಿಲ್, ಕೆ.ಎಲ್. ರಾಹುಲ್, ರವೀಂದ್ರ ಜಡೇಜ ಮತ್ತಿತರರೊಂದಿಗೆ ಆಡಿದ ಜೊತೆಯಾಟಗಳ ಕುರಿತು ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಆದರೆ ಈ ಎಲ್ಲ ಪಾಲುದಾರಿಕೆ ಆಟಗಳಿಗಿಂತಲೂ ಪಂತ್ ಮತ್ತು ಸ್ಟಂಪ್ ಮೈಕ್ ಜೊತೆಯಾಟವೇ ಹೆಚ್ಚು ಜನಪ್ರಿಯವಾಗುತ್ತಿರುವುದು ಸುಳ್ಳಲ್ಲ.

ಹೆಡಿಂಗ್ಲೆ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ರಾಹುಲ್ ಮತ್ತು ಪಂತ್ ಅವರ ಜೊತೆಯಾಟ ಪ್ರಮುಖವಾಗಿತ್ತು. ಅದರಿಂದಾಗಿ ಇಂಗ್ಲೆಂಡ್‌ಗೆ ದೊಡ್ಡ ಗುರಿ ಒಡ್ಡಲು ಸಾಧ್ಯವಾಯಿತು. ಈ ಸಂದರ್ಭದಲ್ಲಿ ರಿಷಭ್ ಒಂದು ಎಸೆತವನ್ನು ಕ್ರೀಸ್ ಮೇಲೆ ಮಲಗಿ ಸ್ಕೂಪ್ ಮಾಡಲು ಯತ್ನಿಸಿದ್ದರು. ಅದೃಷ್ಟವಶಾತ್ ಅದು ಕೀಪರ್ ಮತ್ತು ಸ್ಲಿಪ್ ಫೀಲ್ಡರ್‌ಗಳಿಗೆ ಕ್ಯಾಚ್ ಆಗುವುದು ಸ್ವಲ್ಪದರಲ್ಲಿ ತಪ್ಪಿತ್ತು. ಕೇವಲ ಒಂದು ರನ್ ಪಡೆಯಲು ಸಾಧ್ಯವಾಗಿತ್ತು. ಈ ಸಂದರ್ಭದಲ್ಲಿ ನಾನ್‌ಸ್ಟ್ರೈಕರ್ ಎಂಡ್‌ನಲ್ಲಿ ನಿಂತುಕೊಂಡು ತಮಗೆ ತಾವೇ ಬುದ್ಧಿ ಹೇಳಿಕೊಂಡ ಮಾತಿದು. ಬ್ಯಾಟಿಂಗ್ ಮತ್ತು ವಿಕೆಟ್‌ಕೀಪಿಂಗ್ ಮಾಡುವಾಗ ವಟವಟ ಮಾತನಾಡುವ ಹವ್ಯಾಸ ರಿಷಭ್ ಅವರಿಗೆ ಇದೆ. ಈ ಹಿಂದೆ ವೀರೇಂದ್ರ ಸೆಹ್ವಾಗ್ ಅವರು ಬ್ಯಾಟಿಂಗ್ ಮಾಡುವಾಗ ಹಾಡು ಗುನುಗುತ್ತಿದ್ದರು. ವಿಕೆಟ್‌ಕೀಪರ್ ನಯನ್ ಮೋಂಗಿಯಾ ಅವರು ‘ಐಯೆಗಾ...’ ಎನ್ನುವುದು ಗಮನಸೆಳೆಯುತ್ತಿತ್ತು. ಮಹೇಂದ್ರಸಿಂಗ್ ಧೋನಿ ಬೌಲರ್‌ಗಳಿಗೆ ನೀಡುತ್ತಿದ್ದ ಸೂಚನೆಗಳೂ ಗಮನಾರ್ಹವಾಗಿದ್ದವು.

‘ಒಂದೇ ಜಾಗದಲ್ಲಿ ಚೆಂಡು ಎಸಿತಿದಾನೆ. ಆ ಜಾಗ (ಮೊಣಕಾಲು) ಚೆಂಡು ಬಡಿದು ಬಡಿದು ಬಾವು ಬಂದಿದೆ’ ಎಂದು ಕಾಲು ತಿಕ್ಕಿಕೊಳ್ಳುತ್ತ ರಿಷಭ್ ಹೇಳುವ ಮಾತು ಕೂಡ ನಗೆಯುಕ್ಕಿಸುತ್ತದೆ.

ವಯೋಮಿತಿಯ ಕ್ರಿಕೆಟ್ ಆಡುವ ಕಾಲದಿಂದಲೂ ಇದು ಅವರಿಗೆ ರೂಢಿ. ತಮ್ಮ ಆಟದ ಮೂಲಕ ಅವರು ಹಲವಾರು ಅಭಿಮಾನಿಗಳನ್ನು ಗಳಿಸಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ ತಮ್ಮ ಹಾಸ್ಯಭರಿತ ಮಾತುಗಳಿಂದಾಗಿ ಸ್ನೇಹಬಳಗವನ್ನು ಕಲೆಹಾಕಿದ್ದಾರೆ. ಅದರಲ್ಲಿ ಸುನಿಲ್ ಗಾವಸ್ಕರ್, ನವಜ್ಯೋತ್‌ಸಿಂಗ್ ಸಿಧು, ದಿನೇಶ್ ಕಾರ್ತಿಕ್, ಇರ್ಫಾನ್ ಪಠಾಣ್, ಆಸ್ಟ್ರೇಲಿಯಾದ ಟಿಮ್ ಪೇನ್, ರಿಕಿ ಪಾಂಟಿಂಗ್, ಪ್ಯಾಟ್ ಕಮಿನ್ಸ್, ಇಂಗ್ಲೆಂಡ್‌ನ ನಾಸೀರ್ ಹುಸೇನ್ ಅವರಂತಹ ದಿಗ್ಗಜರೂ ಇದ್ದಾರೆ. ಅಷ್ಟೇ ಅಲ್ಲ, ಅವರ ಈ ಮಾತುಗಳು ಕೇಳುಗರಿಗೆ ಮನರಂಜನೆ ನೀಡುತ್ತಿರುವುದು ಸುಳ್ಳಲ್ಲ. ಆದರೆ ಈ ಹವ್ಯಾಸವು ಪಂತ್ ಅವರಿಗೆ ತಮ್ಮ ಏಕಾಗ್ರತೆ ಮತ್ತು ಶಕ್ತಿಯನ್ನು ನಿರಂತರವಾಗಿ ಕಾಪಾಡಿಕೊಳ್ಳಲು ನೆರವಾಗುತ್ತಿದೆ. ಅದರಲ್ಲೂ ವೈಫಲ್ಯಗಳನ್ನು ಮೀರಿ ನಿಲ್ಲಲು ಮತ್ತು